ಶ್ರೀ ಯು. ಭೂಪತಿ.— ತಾವು ಸ್ವಲ್ಪ ದಯವಹಾತಿ ಕೇಳಿ. ತಾವ್ಯಾಕೆ ಆ ರೀತಿ ಮಾಡಂತ್ತೀರಿ? ಆಗ ಆ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಇದರ ಸಲುವಾಗಿ ಕರ್ನಾಟಕವನ್ನೇ ಬಂದ್ ಮಾಡುತ್ತೇವೆಂಬ ಬಹಿರಂಗ ಆಶ್ವಾಸನೆಯನ್ನು ಕೊಟ್ಟಿದ್ದರು ಆದು ಏನಾಯಿತು ಎಂಬುದಾಗಿ ಕೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.— ಈ ಬಗ್ಗೆ ಬಂದ್ ಮಾಡುವ ಅವಶ್ಯಕತೆ ಇಲ್ಲ. ಬಂದ್ ಮಾಡಿ ವುದರಿಂದ ಇದು ಆಗುವ ಕೆಲಸವು ಅಲ್ಲ. ವಿದ್ಯುತ್ ಬಗ್ಗೆ ಮಾನ್ಯ ಸದಸ್ಯರು ಏನು ಕೇಳಿದ್ದಾರೆ, ಆ ಮಾತನ್ನು ಸರ್ಕಾರ ಈಗಲೂ ಪುನರುಚ್ಚಿಸುತ್ತದೆ. ಅವರು ಯಾವಾಗಲೇ ಆದರೂ ಈ ಕಾರ್ಖಾನೆ ಯನ್ನು ಪ್ರಾರಂಭ ಮಾಡುತ್ತೇವೆಂದರೆ, ಅದಕ್ಕೆ ಬೇಕಾಗುವ ವಿದ್ಯುತ್ತನ್ನು ಪೂರೈಕೆ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬಿ. ಎಂ. ಆಡ್ಕಂತಾಯ.— ಕುದುರೆಮುಖ ಕಾರ್ಖಾನೆಗೆ ವಿದ್ಯುತ್ತನ್ನು ಪೂರೈಸುವ ಬಗ್ಗೆ ತಾವು ಏನು ಆಶ್ವಾಸನೆಯನ್ನು ಕೊಟ್ಟಿದ್ದಿರಲ್ಲ, ಆದರಲ್ಲಿ ಏನು ಮಾಡಿದ್ದೀರಿ ಎಂಬುದನ್ನು ಹೇಳಂತ್ತೀರಾ

ಶ್ರೀ ಜೆ. ಹೆಚ್. ಪಟೇಲ್.— ಈ ತರಹದ ಪ್ರಶ್ನೆಯನ್ನು ಕೇಳುವುದಕ್ಕೆ ತಾವು ಆಲೋ ಮಾಡಬಾರದು.

ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್‌ಗಳ ಆಯ್ಕೆ ಆಗಿದ್ದರೂ ನೇಮಕ ಮಾಡದೆ ಇರಲು ಕಾರಣವೇನು

೧೩೧೩. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಹಾಯಕ ಸರ್ಕಾರಿ ಅಭಿಯೋಜಕರುಗಳನ್ನು ಆಯ್ಕೆಯಾಗಿದ್ದರೂ ಕೆಲಸಕ್ಕೆ ಹಾಜರಾಗಲು ಆದೇಶ ನೀಡದೆ ಇರಲು ಕಾರಣವೇನು ಹಾಗೂ ಯಾವಾಗ ಇವರಿಗೆ ಕೆಲಸಕ್ಕೆ ಹಾಜರಾಗಲು ಆದೇಶ ನೀಡಲಾಗುವುದು

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಈಗಾಗಲೇ ದಿನಾಂಕ ೨೦-೨-೧೯೮೬ ರಂದು ನೇಮಕ ಹಾಗೂ ತೈನಾತಿ ಆದೇಶಗಳನ್ನು ಹೊರಡಿಸಲಾಗಿದೆ.

ಶ್ರೀ ಬಿ. ಜಿ. ಕೊಟ್ರಪ್ಪ.— ಅದಕ್ಕಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ರಾಜ್ಯದಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಸರಿಯಾದ ವ್ಯವಸ್ಥೆ ಇಲ್ಲದಿರುವುದು

೧೪೯೯. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ) — ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳ ಕಟ್ಟಡದಿಂದ ಬರುವ ಆದಾಯ ಎಷ್ಟು ?

ಆ) ಬಹುತೇಕ ಬಸ್ ನಿಲ್ದಾಣಗಳಲ್ಲಿ ಶೌಚಗೃಹಗಳು ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಇ) ಬಂದಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಈ) ಮೈಸೂರು ನಗರದ ಬಸ್ ನಿಲ್ದಾಣದ ಕಟ್ಟಡ ಬಿರುಕು ಬಿಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಉ) ಬಂದಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು ?

ಊ) ಈ ನಿಲ್ದಾಣದಲ್ಲಿ ಪದೇ ಪದೇ ದುರಸ್ತಿ ಕೆಲಸ ಮಾಡಂತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ

ಋ) ಈ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನ ನಿಲ್ದಾಣ ಕಟ್ಟಡಗಳಲ್ಲಿರುವ ವಾಣಿಜ್ಯ ಮಳಿಗೆಗಳು, ಉಪಹಾರ ಗೃಹ, ಪಾನ್ ಬೀಡಾ ಸ್ಟಾಲ್, ಹಣ್ಣಿನ ಅಂಗಡಿಗಳಿಂದ ಸಂಸ್ಥೆಗೆ ಬರುವ ವಾರ್ಷಿಕ ಆದಾಯ ಸುಮಾರು ೬೫,೨೦೦,೦೦೦ ಲಕ್ಷ ರೂ. ಗಳಾಗಿರುತ್ತದೆ.

ಆ) ಬಹುತೇಕ ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಹಾಗೂ ಶೌಚಗೃಹಗಳ ವ್ಯವಸ್ಥೆ ಸಾಧ್ಯವಾದಷ್ಟು ಮಾಡಲಾಗಿದೆ. ಆದಾಗ್ಯೂ ಕೆಲವು ಬಸ್ ನಿಲ್ದಾಣಗಳಲ್ಲಿ ಕೊಳವೆ ಬಾವಿಗಳ ಮೂಲಕ ಅಥವಾ ಸ್ಥಳೀಯ ಸಂಸ್ಥೆಗಳಿಂದ ಸಾಕಷ್ಟು ನೀರು ಸರಬರಾಜು ದೊರೆಯದೆ ಇದ್ದುದರಿಂದ ಶೌಚಗೃಹಗಳ ಸ್ವಚ್ಛತೆಯನ್ನು ಕಾಪಾಡಲು ಸಾಧ್ಯವಾಗಿಲ್ಲ.

ಇ) ಬಸ್ ನಿಲ್ದಾಣಗಳಲ್ಲಿರುವ ಶೌಚಾಲಯಗಳನ್ನು ನವೀಕರಿಸಲು ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಉತ್ತಮ ಪಡಿಸಲು ಹಂತಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಮೈಸೂರು ನಗರದ ಬಸ್ ನಿಲ್ದಾಣದ ಮುಂಭಾಗ ಕಟ್ಟಡದಲ್ಲಿ ಕೊಠಡಿಗಳನ್ನು ಬೇರ್ಪಡಿಸುವ ಗೋಡೆ (ಪಾರ್ಟಿಶನ್‌ವಾಲ್) ಅತಿ ಸೂಕ್ಷ್ಮವಾಗಿ ಬಿರುಕು ಬಿಟ್ಟಿರುವುದು ಗಮನಕ್ಕೆ ಬಂದಿದೆ.

ಉ) ಬಿರುಕು ಬಿಟ್ಟಿರುವ ಭಾಗವನ್ನು ದುರಸ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ

ಊ) ಬಸ್ ನಿಲ್ದಾಣದಲ್ಲಿ ಕೆಲವು ಅವಶ್ಯಕವಾದ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕಾಮಗಾರಿ ಕೆಲಸವನ್ನು ೨ನೇ ಹಂತದಲ್ಲಿ ಕೈಗೊಳ್ಳಲಾಗಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾಮಗಾರಿ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

ಋ) ೨ ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು.

ಅಧ್ಯಕ್ಷರು.—ಪ್ರಶ್ನೆ ನಂ. ೬೫೪(೧೦೦೭) ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ.೬೫೫(೧೨೧೩) ಸದಸ್ಯರು ಗೈರು ಹಾಜರಿ.

ಶ್ರೀ ಎಂ. ಶಿವಣ್ಣ —ಬಸ್ ನಿಲ್ದಾಣಗಳಲ್ಲಿ ಮಾನ್ಯ ಸಚಿವರು ಹೇಳಿದ ರೀತಿಯಲ್ಲಿ ಅಲ್ಲಿರುವ ಶೌಚಾಲಯಗಳು ಇಲ್ಲ. ಅಲ್ಲಿ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಮೈಸೂರು ನಗರದಲ್ಲಿರುವ ಬಸ್ ನಿಲ್ದಾಣವನ್ನು ಬೇಗ ಪೂರೈಸಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ ಜಿ. ಆರ್. ಸಿಂಧ್ಯ.—ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇನೆ ನನಗೂ ಸಹಿತ ಸಮಾಧಾನವಾಗಿಲ್ಲ. ಕುಡಿಯುವ ನೀರನ್ನು ಪೂರೈಸುವುದಕ್ಕಾಗಿಲ್ಲ. ಬಸ್ ನಿಲ್ದಾಣಗಳಲ್ಲಿ ಬೋರ್ ವೆಲ್‌ಗಳನ್ನು ಹಾಕಿದರೂ ನೀರು ಸಿಕ್ಕುತ್ತಿಲ್ಲ. ಬೇರೆ ಕಡೆಯಿಂದ ತರಿಸಿ ಅದನ್ನು ಸ್ವಚ್ಛವಾಗಿ ಇಟ್ಟು ಜನರಿಗೆ ಪೂರೈಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೇವೆ. ಕೆಲವು ಕಡೆ ಬಹಳ ಚೆನ್ನಾಗಿ ಅದು ನಡೆಯುತ್ತಿದೆ. ಬೆಂಗಳೂರು ನಗರದ ಬಸ್ ನಿಲ್ದಾಣದಲ್ಲೇ ಈ ಬಗ್ಗೆ ವ್ಯವಸ್ಥೆ ಮಾಡಿರುವುದು ಮಾನ್ಯ ಸದಸ್ಯರ ಗಮನಕ್ಕೂ ಬಂದಿರಲಿಕ್ಕೆ ಸಾಕು. ಮೈಸೂರು ನಗರದಲ್ಲಿರುವ ಬಸ್ ನಿಲ್ದಾಣದಲ್ಲೂ ಆ ಕೆಲಸಗಳನ್ನು ಇನ್ನೆರಡು ತಿಂಗಳಲ್ಲಿ ಪೂರೈಸುತ್ತೇನೆ.

ಶ್ರೀ ಬಿ. ಎಸ್. ಯಂಡಿಯೂರಪ್ಪ.—ತಿಪಟೂರು ಬಸ್ ನಿಲ್ದಾಣದಲ್ಲಿ ಶೌಚಾಲಯವನ್ನು ಕಟ್ಟಿ ಮುಗಿಸಿದ್ದರೂ ಸುಮಾರು ೨ ವರ್ಷಗಳಾದರೂ ಅದನ್ನು ಇದುವರೆವಿಗೂ ಪ್ರಾರಂಭ ಮಾಡಿಲ್ಲ. ಜನ ನಾವು ಹೋದಾಗಲೆಲ್ಲಾ ಆ ಬಗ್ಗೆ ಕೇಳುತ್ತಲೇ ಇರುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಿಪಟೂರಿನಲ್ಲಿ ರಸ್ತೆ ಸಾರಿಗೆ ಸಂಸ್ಥೆಗೆ ಸೇರಿದ ಬಸ್ ನಿಲ್ದಾಣವೇ ಇಲ್ಲ.